# ಮತ್ತೆ ಇಂತಹ ಪಾತ್ರ ಸಿಗಲಾರದು



ನಾಗನಿಧಿಗೌಡ
ಸ್ಟಾರ್‌ಸುವರ್ಣ
'ಜೇನುಗೂಡು'
ಮಾಧವಿ

◆ ಮಧ್ಯ ವಯಸ್ಕಳ ಪಾತ್ರ ಹೇಗೆ ಅನ್ನಿಸುತ್ತಿದೆ?

ಕರಾವಳಿಯ ನಾನು ಉತ್ತರ ಕರ್ನಾಟಕದ ಹೆಂಗಸಿನ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ನನ್ನ ವಯಸ್ಸಿಗಿಂತ ದೊಡ್ಡ ಪಾತ್ರ. ಆದರೂ ಕಥೆಯಲ್ಲಿ ಪ್ರಮುಖ್ಯತೆ ಮತ್ತು ನಿರಂತರತೆ ಇದೆ. ಮೂವರು ಸೊಸೆಯರಲ್ಲಿ ನಾನು ಒಬ್ಬಳು. ಈ ರೀತಿಯ ಪಾತ್ರವನ್ನು ಇದುವರೆಗೆ ಮಾಡಿಲ್ಲ. ನನಗೆ 12 ವರ್ಷದ ಮಗಳಿದ್ದಾಳೆ. ಸದ್ಯ ಆಕೆ 18 ವರ್ಷದವಳಾಗುತ್ತಾಳೆ. ನಾನು 38 ವರ್ಷದವಳಾಗಿದ್ದೇನೆ. ಇದು ಒಂದು ರೀತಿಯ ಸವಾಲು ಎಂದೇ ಭಾವಿಸಿದ್ದೇನೆ.

◆ ಮುಂದೆ ಇಂತಹ ಪಾತ್ರಗಳಿಗೆ ಸಮೀತ ಆಗುತ್ತೇನೆ ಎನ್ನುವ ಆತಂಕ ಕಾಡಲಿಲ್ಲವೇ?

ಮೊದಲು ಬೇಡ ಅಂದುಕೊಂಡಿದ್ದೆ. ನೋಡೋಣ ಆಡಿಷನ್ ಕೊಡುವ ಎಂದು ಕೊಟ್ಟಿದ್ದೆ. ಈ ಪಾತ್ರಕ್ಕೆ ಅಲ್ಲದಿದ್ದರೂ ಬೇರೆ ಪಾತ್ರ ಸಿಗಬಹುದು ಎಂಬ ನಿರೀಕ್ಷೆ ಆಗ ನನಗಿತ್ತು. ಹಾಗಾಗಿ ಅವರು ಕೊಟ್ಟ ಸ್ಕ್ರಿಪ್ಟಿಗೆ ವಿಡಿಯೊ ಮಾಡಿ ಕಳಿಸಿದೆ. ಲುಕ್ ಟೆಸ್ಟ್‌ಗೆ ಕರೆದರು. ಆ ಪಾತ್ರಕ್ಕೆ ಬೇರೆಯವರನ್ನು ಮೊದಲು ಆಯ್ಕೆ ಮಾಡಿದ್ದರು. ಕೊನೆಯ ಹಂತದಲ್ಲಿ ಅವರನ್ನು ಬದಲಿಸಿ ನನಗೆ ಕೊಟ್ಟಿದ್ದರು. ಈ ಪಾತ್ರ ನನಗೆ ಸೂಟ್ ಆಗಲ್ಲ ಎಂದು ಭಾವಿಸಿದ್ದ ನನಗೆ ಮರುದಿನವೇ ಪ್ರೊಮೊ ಸೂಟ್ ಇದೆ. ನನ್ನನ್ನೇ ಆಯ್ಕೆ ಮಾಡಿರುವುದಾಗಿ ಫೋನ್ ಕರೆ ಬಂತು. ಇಷ್ಟು ದೊಡ್ಡ ಪಾತ್ರ ನಿಭಾಯಿಸಬೇಕು ಎಂದು ಯೋಚಿಸಿದೆ. ಬಂದ ಅವಕಾಶ ತಪ್ಪಿಸಿಕೊಳ್ಳುವುದು ಬೇಡ ಎಂದು ಒಪ್ಪಿಕೊಂಡೆ. ಏಕೆಂದರೆ, ಆಕಸ್ಮಿಕವಾಗಿ ಇಂತಹ ಪಾತ್ರ ಸಿಕ್ಕಿದೆ. ಮತ್ತೆ ಇಂತಹ ಪಾತ್ರ ಸಿಗುವುದಿಲ್ಲ. ಎಂದು ಈ ಸವಾಲನ್ನು ಎದುರುಗೊಂಡಿದ್ದೇನೆ.

◆ ನಿಮ್ಮ ಬೇರೆ ಬೇರೆ ಹವ್ಯಾಸ, ಅಭಿರುಚಿಗಳ ಬಗ್ಗೆ ಹೇಳಿ.

ವೈಯಕ್ತಿಕವಾಗಿ ನನಗೆ ಬೇಕಾಗಿದ್ದನ್ನು ನಾನು ಅಳವಡಿಸಿಕೊಂಡಿದ್ದೇನೆ. ನನ್ನ ಖುಷಿಗಾಗಿ ಯಕ್ಷಗಾನ ಕಲಿತಿದ್ದೇನೆ. ಆಗಾಗ ವೇಷವನ್ನೂ ಹಾಕುತ್ತೇನೆ. ನನ್ನ ಆರೋಗ್ಯದ ದೃಷ್ಟಿಯಿಂದ ಯೋಗವನ್ನು ಕಲಿತಿದ್ದೇನೆ. ಅದನ್ನು ಗಂಭೀರವಾಗಿಯೇ ಮಾಡುತ್ತೇನೆ. ಫಿಟ್‌ನೆಸ್ ಸಂಬಂಧ ಬೆಳಿಗ್ಗೆ ವಾಕಿಂಗ್– ರನಿಂಗ್ ಮಾಡುತ್ತೇನೆ. ಇದೆಲ್ಲ ನನ್ನ ಮನಸ್ಸು ಮತ್ತು ದೇಹದ ಆರೋಗ್ಯದ ದೃಷ್ಟಿಯಿಂದ ಮಾಡುತ್ತೇನೆಯೇ ಹೊರತು ವೃತ್ತಿಪರವಾಗಿ ತೆಗೆದುಕೊಳ್ಳುವುದಿಲ್ಲ. ಇದರ ಜೊತೆ ಮಾರ್ಷಲ್ ಆರ್ಟ್ಸ್ ಕೂಡ ಕಲಿತಿದ್ದೇನೆ. ಓದುತ್ತೇನೆ, ಕವಿತೆಗಳನ್ನು ಬರೆಯುತ್ತೇನೆ. ಮೀನನ್ನು ಖುಷಿಯಿಂದ ತಿನ್ನುತ್ತೇನೆ. ಡೈರಿ ಬರೆಯುತ್ತೇನೆ.

◆ ನಿಮ್ಮ ರಂಗಚಟುವಟಿಕೆಯ ಬಗ್ಗೆ ಹೇಳಿ?

ನನ್ನ ಅಕ್ಕನ ಹೆಸರು ಮಹಾಸತಿಗೌಡ ನಮ್ಮ ಹೆಸರೇ ಭಿನ್ನ. ಆಕೆ 'ಕ್ಷಮಾ' ಧಾರಾವಾಹಿಯಲ್ಲಿ ಮಾಡುತ್ತಿದ್ದಳು ಮದುವೆ ನಂತರ ಬಿಟ್ಟಿದ್ದಾಳೆ. ನಾವಿಬ್ಬರೂ ರಂಗಭೂಮಿ ಚಟುವಟಿಕೆಯನ್ನೂ ಮಾಡುತ್ತೇವೆ. ನಮ್ಮ ಊರಲ್ಲಿ ಯಕ್ಷಗಾನ ಹೆಚ್ಚು ಜನಪ್ರಿಯ. ಅದಕ್ಕೆ ಹೋಲಿಸಿದರೆ ನಾಟಕಗಳು ಸ್ವಲ್ಪ ಕಡಿಮೆ. ನಾವಿಬ್ಬರೂ ರಂಗಚಟುವಟಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುವ ಉದ್ದೇಶವನ್ನು ಹೊಂದಿದ್ದೇವೆ. ಅದಕ್ಕಾಗಿ ಒಂದಿಷ್ಟು ಯೋಜನೆಗಳನ್ನೂ ಹಾಕಿಕೊಂಡಿದ್ದೇವೆ. ಈ ಹಿಂದೆ ಹೊನ್ನಾವರದ ಸರ್ಕಾರಿ ಪದವಿ ಕಾಲೇಜಿಗೆ ನಾಟಕವನ್ನು ನಾನು ಮಾಡಿಸಿದ್ದೆ. ನನ್ನ ಅಕ್ಕ ಶಿರಸಿಯ ಕಾಲೇಜಿನಲ್ಲಿ ಮಾಡಿಸಿದ್ದಳು.

◆ ಆಡಿಷನ್ನಿಗೆ ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು?

ಸಹಜವಾಗಿಯೇ ತೆಗೆದುಕೊಳ್ಳುತ್ತೇನೆ ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವುದಿಲ್ಲ. ನನ್ನ ಪಾತ್ರದ ಬಗ್ಗೆ ವಿವರ ಕೇಳಿ ಅದರ ಲುಕ್ ಬಗ್ಗೆ ಯೋಚಿಸುತ್ತೇನೆ. ಆಡಿಷನ್ನಿಗೆ ಹೆಚ್ಚು ಹೋಗಿಲ್ಲ. ಲುಕ್ ಟೆಸ್ಟ್‌ಗೆ ಹೋದಾಗ ಪಾತ್ರದ ಗೆಟೆಪ್‌ಗೆ ನಾನು ಸಿದ್ಧಳಾಗುತ್ತೇನೆ. ಅಂದರೆ ಅವರ ನಿರೀಕ್ಷಿತ ಪಾತ್ರಕ್ಕೆ ನಾನು ಎಷ್ಟು ಚೆನ್ನಾಗಿ ಕಾಣಲು ಸಾಧ್ಯವೋ ಅಂತಹ ಗೆಟಪಿನಲ್ಲೇ ಹೋಗುತ್ತೇನೆ. ಆತ್ಮವಿಶ್ವಾಸದಿಂದ ನನಗೆ ಸಾಧ್ಯ ಆದಷ್ಟು ನ್ಯಾಯವನ್ನು ಕೊಡುತ್ತೇನೆ. ಆದಷ್ಟು ಡಿಸೆಂಟ್ ಪಾತ್ರವೇ ನನಗೆ ಇಷ್ಟ. ಯೋಚನೆ ಮಾಡಿಕೊಂಡು ಹೋದರೆ ಕಲಾವಿದೆ ಅನ್ನಿಸುವುದಿಲ್ಲ. ಹೋದಮೇಲೆ ಸೀನ್ ಪೇಪರ್ ನೋಡಿ ಆಗಲೇ ಸಿದ್ಧ ಆಗುತ್ತೇನೆ.

◆ ರಂಗಾಸಕ್ತರಿಗೆ ನಿಮ್ಮ ಸಲಹೆ ಏನು?

ಮೊದಲು ನಮ್ಮ ಮನಸ್ಥಿತಿಯನ್ನು ಸಿದ್ಧ ಮಾಡಿಕೊಂಡಿರಬೇಕು. ಚಿಕ್ಕ ತಂಡ ಆದರೂ ಸರಿ ಯಾವುದಾರೂ ತಂಡದ ಮೂಲಕ ಕಲಿಯುವುದು ತುಂಬ ಒಳ್ಳೆಯದು. ನಟನೆಯನ್ನು ತರಬೇತಿಯಲ್ಲೇ ಕಲಿಯಬೇಕು ಎನ್ನುವ ನಿಯಮ ಇಲ್ಲ. ಯಾವುದೇ ರಂಗ ತಂಡದಲ್ಲಿ ಇದ್ದರೂ ಕಲಿಯುವುದು ಸಾಕಷ್ಟು ಇರುತ್ತದೆ. ಅಲ್ಲಿ ಅನೇಕ ಅನುಭವಿಗಳು ಸಂಪರ್ಕಕ್ಕೆ ಬರುತ್ತಾರೆ. ಪ್ರಾಯೋಗಿಕ ಕಲಿಕೆಗೆ ಹೆಚ್ಚು ಅವಕಾಶ ಇರುತ್ತದೆ. ನಾಟಕ ತಿರುಗಾಟವೇ ನಟನೆಯನ್ನು ಪಕ್ಕಾ ಮಾಡುತ್ತದೆ. ನಾನೂ ಮೊದಲು ರಂಗ ತರಬೇತಿ ಪಡೆದರೆ ಮಾತ್ರ ಅಭಿನಯಕ್ಕೆ ಅವಕಾಶ ಸಿಗುತ್ತವೆ ಎಂದು ಭಾವಿಸಿದ್ದೆ. ಆಮೇಲೆ ಸತ್ಯ ಗೊತ್ತಾಯಿತು. ನನಗೆ ಸರ್ಟಿಫಿಕೆಟ್ ಪ್ರಯೋಜನಕ್ಕೆ ಬಂದಿಲ್ಲ. ಇಲ್ಲಿ ದಾಖಲೆಗಿಂತ ಪ್ರಯೋಗ ಮುಖ್ಯ.

■ ರಾಘವೇಂದ್ರ ಕೆ.